**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 820/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ನೀಲಪ್ಪ |
| ತಂದೆಯ ಹೆಸರು | : | ಶಿವಲಿಂಗಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೊಸಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 17.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-2 ರಿಂದ ಚಾಸಾ-4 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮದವರು. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ನಾನು ಒಂದು ದಿನ ಹೆಚ್.ಡಿ. ಕೋಟೆಗೆ ಬಂದಾಗ ಪೋಲೀಸರು 01 ಮಹಜರ್ ಗೆ ಸಹಿ ಹಾಕುವಂತೆ ತಿಳಿಸಿದ್ದು, ಆ ಪ್ರಕಾರ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ನನಗೆ ಬೇರೇನೂ ವಿಚಾರ ಗೊತ್ತಿರುವುದಿಲ್ಲ. ಸಾಕ್ಷಿಗೆ ನಿ.ಪಿ.-3 ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿ.ಪಿ.-3(ಸಿ)** ಎಂದು ಗುರುತಿಸಲಾಯಿತು. ಸದರಿ ಮಹಜರ್ ನಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 02.06.2020 ರಂದು ಪೋಲೀಸರು ನನ್ನನ್ನು ಹಾಗು ಚಾಸಾ-4 ರವರನ್ನು ಚಾಸಾ-2 ರವರ ಮನೆಯ ಬಳಿ ಕರೆಯಿಸಿ ಈ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರ್ ಸಮಯದಲ್ಲಿ ಸಾಕ್ಷಿಯಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ-2 ಹಾಗು ಚಾಸಾ-3 ರವರು ಪೋಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲೀಸರು ನನ್ನ, ಚಾಸಾ-2 ರಿಂದ ಚಾಸಾ-4 ರವರ ಸಮಕ್ಷಮ ನಿ.ಪಿ.-3 ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕದಂದು ನಿ.ಪಿ.-3 ನ್ನು ಬರೆಯುವಾಗ ಸ್ಥಳದಲ್ಲಿದ್ದು ಸದರಿ ಮಹಜರ್ ನಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**ಮರುವಿಚಾರಣೆ**: ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**